## ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಎಂ. ನಾಗರಾಜು, ಶಾಸಕರು ರವರು ಮಂಡಿಸಿರುವ ಶೂನ್ಯ ವೇಳೆಯ ಸೂಚನೆಗೆ ಸರ್ಕಾರದ ಹೇಳಿಕೆ.

**-: ಸೂಚನೆ :-**

ಬೆಂಗಳೂರು ನಗರವನ್ನು ಒಳಗೊಂಡಂತೆ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಸಾರ್ವಜನಿಕ ಹಿತೋದ್ದೇಶಗಳಿಗಾಗಿ ಸರ್ಕಾರ ಮಂಜೂರು ಮಾಡಿದ ಭೂಮಿಗಳಿಗೆ ಕಂದಾಯ ಇಲಾಖೆಯಿಂದ ಪೋಡಿ (Podi/Sub-Division) ಪ್ರಕ್ರಿಯೆ ಪೂರ್ಣಗೊಳ್ಳದಿರುವ ಹಿನ್ನೆಲೆಯಲ್ಲಿ ಮಹತ್ವದ ಸಾರ್ವಜನಿಕ ಯೋಜನೆಗಳು ವಿಳಂಬವಾಗುತ್ತಿವೆ. ಶಾಲಾ-ಕಾಲೇಜುಗಳು, ಸಾರ್ವಜನಿಕ ಕಛೇರಿಗಳು, ಮುದ್ರಣಾಲಯಗಳು ಸೇರಿದಂತೆ ಹಲವು ಸಾಮಾಜಿಕ ಉದ್ದೇಶಗಳಿಗಾಗಲಿ ಸರ್ಕಾರವು ಭೂಮಿಯನ್ನು ನಿಗಧಿಪಡಿಸಿದ ಎಲ್ಲಾ ಷರತ್ತುಗಳನ್ನು ಪಾಲಿಸಿ, ಅಗತ್ಯ ಶುಲ್ಕಗಳನ್ನು ಕೂಡ ಪಾವತಿಸಿವೆ. ಆದರೆ, ಗಮನಾರ್ಹವಾಗಿ ಈ ಮಂಜೂರಾದ ಜಾಗಗಳಿಗೆ ಕಂದಾಯ ಇಲಾಖೆಯ ಪೋಡಿ ಪ್ರಕ್ರಿಯೆ ನಡೆಯದೆ ಹಲವು ಪ್ರಕರಣಗಳು ಬಾಕಿ ಉಳಿದಿವೆ. ವಿಶೇಷವಾಗಿ ಬೆಂಗಳೂರು ನಗರದಲ್ಲಿ ಕಂದಾಯ ಇಲಾಖೆ ಮತ್ತು ನಗರಾಭಿವೃದ್ಧಿ ಸಂಸ್ಥೆಗಳ ನಡುವೆ ಸಮರ್ಪಕ ಸಮನ್ವಯದ ಕೊರತೆಯಿಂದಾಗಿ ಪೋಡಿ ಪ್ರಕ್ರಿಯೆ ತಿಂಗಳುಗಳ ಕಾಲ ವಿಳಂಬವಾಗುತ್ತಿವೆ. ಈ ವಿಳಂಬದಿಂದಾಗಿ ಕಟ್ಟಡ ನಿರ್ಮಾಣ ಅನುಮತಿಗಳು ಬಾಕಿ ಉಳಿದಿವೆ, ಯೋಜನೆಗಳ ತಾಂತ್ರಿಕ ಅನುಮೋದನೆ ಮತ್ತು ಕ್ಲಿಯರೆನ್ಸ್ ದೊರೆಯುತ್ತಿಲ್ಲ, ಮತ್ತು ಸರ್ಕಾರಿ ಹಾಗೂ ಸಾರ್ವಜನಿಕ ಹಿತಾಸಕ್ತಿ ಯೋಜನೆಗಳು ಸ್ಥಗಿತಗೊಂಡಿವೆ, ಪ್ರಯುಕ್ತ ಸರ್ಕಾರ ಮಂಜೂರು ಮಾಡಿದ ಭೂಮಿಗಳಿಗೆ ಪೋಡಿ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು, ಬೆಂಗಳೂರು ನಗರಕ್ಕೆ ವಿಶೇಷ ಅಭಿಯಾನ (Special Drive) ರೂಪಿಸುವಂತೆ ಕಂದಾಯ ಇಲಾಖೆ ಮತ್ತು ನಗರಾಭಿವೃದ್ಧಿ ಸಂಸ್ಥೆಗಳ ನಡುವೆ ಜಂಟಿ ಕಾರ್ಯಪಡೆ ರಚಿಸಿ ವಿಳಂಬ ಸಂಭವಿಸದಂತೆ ಸಮನ್ವಯ ವ್ಯವಸ್ಥೆ ಜಾರಿಗೆ ತರಲು ಮತ್ತು ಪೋಡಿ ಪ್ರಕ್ರಿಯೆಗೆ ನಿರ್ದಿಷ್ಟ ಕಾಲಬಂಧಿತ ಮಾರ್ಗಸೂಚಿ (SOP) ರೂಪಿಸಿ ಕನಿಷ್ಟ 30 ದಿನಗಳ ಗಡುವು ಜಾರಿಗೆ ತರಲು ಮಾನ್ಯ ಕಂದಾಯ ಸಚಿವರನ್ನು ಕೋರಿರುತ್ತಾರೆ.

**-: ಹೇಳಿಕೆ :-**

ಬೆಂಗಳೂರು ನಗರವನ್ನು ಒಳಗೊಂಡಂತೆ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಸಾರ್ವಜನಿಕ ಹಿತೋದ್ದೇಶಗಳಿಗಾಗಿ ಸರ್ಕಾರ ಮಂಜೂರು ಮಾಡಿದ ಭೂಮಿಗಳಿಗೆ ಕಂದಾಯ ಇಲಾಖೆಯಿಂದ ಪೋಡಿ (Podi/Sub-Division) ಪ್ರಕ್ರಿಯೆ ಪೂರ್ಣಗೊಳ್ಳದಿರುವ ಹಿನ್ನೆಲೆಯಲ್ಲಿ ಮಹತ್ವದ ಸಾರ್ವಜನಿಕ ಯೋಜನೆಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಸರ್ಕಾರದಿಂದ ವಿವಿಧ ರೀತಿಯಾಗಿ ಮಂಜೂರಿಯಾದ ಜಮೀನುಗಳ ಪೋಡಿ ದುರಸ್ತಿಗಾಗಿ ಕಂದಾಯ ಅಧಿಕಾರಿಗಳು ಮಂಜೂರಿ ನೈಜತೆಯನ್ನು ಖಾತರಿ ಪಡಿಸಿಕೊಂಡು ಭೌತಿಕವಾಗಿ ನಮೂನೆ 1 ರಿಂದ 5 ಭರ್ತಿ ಮಾಡಿ, ಸಂಬಂಧಿಸಿದ ಉಪ ವಿಭಾಗಾಧಿಕಾರಿಗಳು ಮತ್ತು ಭೂದಾಖಲೆಗಳ ಉಪ ನಿರ್ದೇಶಕರು ಮೇಲು ಸಹಿ ಮಾಡಿ ಮೂಲ ಮಂಜೂರಿ ಕಡತವನ್ನು ಭೂಮಾಪನ ಶಾಖೆಗೆ ವರ್ಗಾಯಿಸಿದ ನಂತರ ಅಳತೆ ಕೆಲಸ ನಿರ್ವಹಿಸಿ ನಮೂನೆ 6 ರಿಂದ 10 ಅನ್ನು ಭರ್ತಿ ಮಾಡಿ ದರಖಾಸ್ತು ಪೋಡಿ ದುರಸ್ತಿಪಡಿಸಲಾಗುತ್ತಿತ್ತು. ಕಡತಗಳ ನಿರ್ವಹಣೆ ಮತ್ತು ಚಲನವಲನವನ್ನು ಭೌತಿಕವಾಗಿ ನಿರ್ವಹಿಸುತ್ತಿದ್ದರಿಂದ ಈ ಪ್ರಕ್ರಿಯೆಯಲ್ಲಿ ಸಾಕಷ್ಟು ವಿಳಂಬ ಮತ್ತು ತಪ್ಪುಗಳಾಗುವ ಸಾಧ್ಯತೆಯಿತ್ತು.

ಆದರೆ, 2024-25ನೇ ಸಾಲಿನ ಆಯವ್ಯಯ ಕಂಡಿಕೆ-395 ರನ್ವಯ ದರಖಾಸ್ತು ಪೋಡಿ ಅಭಿಯಾನ ಪ್ರಾರಂಬಿಸಿ, ಮಂಜೂರಿ ಜಮೀನುಗಳ ದುರಸ್ತಿ ಪ್ರಕ್ರಿಯೆಯನ್ನು ಸುಗಮಗೊಳಿಸಲು, ಯಾವುದೇ ತಕರಾರು ಇಲ್ಲದೆ ಇರುವ ಜಮೀನುಗಳಿಗೆ ಸರ್ಕಾರದಿಂದ ಸ್ವಯಂ ಪ್ರೇರಿತವಾಗಿ ನಮೂನೆ 01 ರಿಂದ 05

ಅನ್ನು ಸಿದ್ಧಪಡಿಸುವುದಾಗಿ ಘೋಷಿಸಿದ್ದು, ಅದರಂತೆ, ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್ಎಸ್ಎಂ 2024, ದಿನಾಂಕ:25-11-2024ರಲ್ಲಿ ನಮೂನೆ 1 ರಿಂದ 5 ಮತ್ತು 6 ರಿಂದ 10 ಗಳ ಭರ್ತಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರಳೀಕರಿಸಿ ಆದೇಶಿಸಿದೆ.

ಅದರಂತೆ, ನಮೂನೆ 1 ರಿಂದ 5 ಗಳಿಗೆ ಸಂಬಂಧಿಸಿದ ಉಪ ವಿಭಾಗಾಧಿಕಾರಿಗಳು ಮತ್ತು ಭೂದಾಖಲೆಗಳ ಉಪ ನಿರ್ದೇಶಕರು ಮೇಲು ಸಹಿ ಮಾಡಬೇಕಾಗಿರುವ ಕ್ರಮವನ್ನು ರದ್ದುಪಡಿಸಿ, ಸದರಿ ದೃಢೀಕರಿಸುವ ಜವಾಬ್ದಾರಿಯನ್ನು ತಹಶೀಲ್ದಾರ್ ರವರಿಗೆ ಸೀಮಿತಗೊಳಿಸಿದೆ ಮತ್ತು ಸರ್ಕಾರಿ ಸರ್ವೆ ನಂಬರಿನ ಎಲ್ಲಾ ಮಂಜೂರಿದಾರರಿಗೆ ಏಕ ಕಾಲದಲ್ಲಿ ದುರಸ್ತಿ ಪಡಿಸುವಂತೆ ಸೂಚಿಸಿದೆ.

ಕಡ್ಡಾಯವಾಗಿ ಪ್ರತಿ ಸರ್ವೆ ನಂಬರಿಗೆ ಒಂದು ಬಾರಿಗೆ ಎಲ್ಲಾ ಮಂಜೂರಿದಾರರಿಗೆ ಏಕಕಾಲಕ್ಕೆ ನಮೂನೆ 1 ರಿಂದ 5 ಗಳನ್ನು ಭರ್ತಿ ಮಾಡಿ ಡಿಜಿಟಲ್ ಮೇಲು ಸಹಿ ಮಾಡಲು & ಅದೇ ರೀತಿ ಅಳತೆ ಪ್ರಕರಣಗಳ ನಿರ್ವಹಣೆಯನ್ನು ಸಹ ಆನ್‌ಲೈನ್ ನಲ್ಲಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದಿಂದ ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದೆ (Darkasth phodi flow chart attached).

ತಂತ್ರಾಂಶದ ಮೂಲಕ ನಮೂನೆ-1 ರಿಂದ 05 ನ್ನು ಭರ್ತಿ ಮಾಡುವಲ್ಲಿ ಈ ಕೆಳಗಿನ ವಿವರಗಳನ್ನು ಸಂಗ್ರಹಿಸಿ ನಮೂದಿಸಲಾಗುತ್ತಿದೆ.

1. ನಮೂನೆ-1 ರಲ್ಲಿ ಒಂದು ಪ್ರಸ್ತಾಪಿತ ಸರ್ವೆ ನಂಬರಿನಲ್ಲಿ ಭೂಮಂಜೂರಾತಿಯಾದ ಎಲ್ಲಾ ಮಂಜೂರಿದಾರರ ವಿವರಗಳನ್ನು,
2. ನಮೂನೆ-2ರಲ್ಲಿ ಮಂಜೂರಾತಿ ಕೋರಿ ಸಲ್ಲಿಕೆಯಾಗಿರುವ ಬಾಕಿ ನಮೂನೆ 50/53/57 ರ ವಿವರಗಳನ್ನು,
3. ನಮೂನೆ-3 ರಲ್ಲಿ ಸರ್ಕಾರಿ ಜಮೀನುಗಳನ್ನು ಗುತ್ತಿಗೆಗೆ ನೀಡಿರುವ ವಿವರಗಳನ್ನು ಹಾಗೂ
4. ಹಾಗೂ ನಮೂನೆ-4 ರಲ್ಲಿ ಬೇರೆ ಇಲಾಖೆ/ಸಂಸ್ಥೆಗಳಿಗೆ ಸರ್ಕಾರಿ ಜಮೀನುಗಳ ಭೂಸ್ವಾಧೀನ ಮತ್ತು ವರ್ಗಾವಣೆ ಕುರಿತು ವಿವರಗಳನ್ನು ನಮೂದಿಸಲಾಗುತ್ತಿದೆ.

ಈ ರೀತಿಯಲ್ಲಿ ದಾಖಲೆಗಳ ಸರಳೀಕರಣಕರಣಗೊಳಿಸಲಾಗಿದ್ದು, ಅತ್ಯಗತ್ಯವಾದ ಕನಿಷ್ಠ ದಾಖಲಾತಿಗಳು ಲಭ್ಯವಿದ್ದಲ್ಲಿ ಹಾಗೂ ಅವುಗಳ ನೈಜತೆಯು ಖಚಿತವಾದಲ್ಲಿ ಪೋಡಿಗೆ ಕ್ರಮವಹಿಸಲಾಗುತ್ತಿದೆ. (ಉದಾ:ಭೂಮಂಜೂರಾತಿ ಪ್ರಕರಣಗಳಲ್ಲಿ, ಅಧಿಕೃತ ಜ್ಞಾಪನ ಅಥವಾ ದರಖಾಸ್ತು ವಹಿ ಅಥವಾ ಮಂಜೂರಿ ನಡಾವಳಿ ವಹಿ, ಸಾಗುವಳಿ ಚೀಟಿ ಅಥವಾ ಸಾಗುವಳಿ ಚೀಟಿ ವಿತರಣಾ ವಹಿ ಹಾಗೂ ಚಾಲ್ತಿ ಪಹಣಿಗಳಿದ್ದಲ್ಲಿ ಪೋಡಿಗೆ ಕ್ರಮವಹಿಸಬಹುದಾಗಿದೆ.)

ಈ ಹಿಂದೆ ಯಾವುದೇ ಭೂಮಂಜೂರಿ ಕಡತದಲ್ಲಿ ಪೋಡಿಗೆ ಅಗತ್ಯವಿದ್ದ ಕನಿಷ್ಠ 5 ದಾಖಲೆಗಳನ್ನು 3 ಕ್ಕೆ ಇಳಿಸಲಾಗಿದೆ. ಅದರಂತೆ ತಹಶೀಲ್ದಾರರು ಮಂಜೂರಿ ನೈಜತೆಯನ್ನು ಪರಿಶೀಲಿಸಿಕೊಂಡು ಅಳತೆಗಾಗಿ ಅನುಬಂಧ-1 ರಂತೆ ಅಧಿಕೃತ ಜ್ಞಾಪನವನ್ನು ಆನ್‌ಲೈನ್ ನಲ್ಲಿ ಅಳತೆಗೆ ಒದಗಿಸಲು, ನಂತರ 30 ದಿನಗಳಲ್ಲಿ ಸರ್ವೆ ಅಧಿಕಾರಿಗಳು ಅರ್ಹ ಪ್ರಕರಣಗಳಲ್ಲಿ ಅಳತೆ ಕೈಗೊಂಡು ಪೋಡಿ ದುರಸ್ತಿ ಪಡಿಸಲು ಸೂಚಿಸಲಾಗಿದ್ದು ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಅದರಂತೆ ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ದಾಖಲೆಯ 1,51,371 ಭೂ ಮಂಜೂರಿದಾರರಿಗೆ ಮಂಜೂರಾದ ಸರ್ಕಾರಿ ಜಮೀನುಗಳಿಗೆ ಸ್ವಯಂಪ್ರೇರಿತವಾಗಿ ಉಚಿತವಾಗಿ ಅಂತಿಮ ಮಾಲೀಕತ್ವದ ದಾಖಲೆಗಳನ್ನು ತಯಾರಿಸಲಾಗಿದೆ.

ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಹೆಚ್ಚಿನ ಮಂಜೂರು ದಾಖಲೆಗಳು ಲಭ್ಯವಾಗದಿರುವುದು ಮತ್ತು ಲಭ್ಯ ದಾಖಲೆಗಳು ತಿದ್ದಿರುವ/ನಕಲಿ ದಾಖಲೆಗಳಾಗಿರುವ ಸಾಧ್ಯತೆಯಿರುವುದರಿಂದ, ಸರ್ಕಾರಿ ಜಮೀನು ಅಕ್ರಮವಾಗಿ ಖಾಸಗಿಯವರ ಪಾಲಾಗುವುದನ್ನು

ತಡೆಯುವ ಸಲುವಾಗಿ ಬೆಂಗಳೂರು ನಗರ ಜಿಲ್ಲೆಯಲ್ಲಿನ ಮಂಜೂರಿ ದಾಖಲೆಗಳ ನೈಜತೆಯನ್ನು ತಾಂತ್ರಿಕವಾಗಿ ಪರಿಶೀಲಿಸಿಕೊಂಡು ನಂತರ ಮುಂದಿನ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಕಾರಣ ಬೆಂಗಳೂರು ನಗರ ಜಿಲ್ಲೆ ವ್ಯಾಪಿಯಲ್ಲಿ ಸರ್ಕಾರದಿಂದ ಮಂಜೂರು ಮಾಡಿರುವ ಜಮೀನುಗಳಿಗೆ ಪೋಡಿ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ವಿಶೇಷ ಅಭಿಯಾನ ಪ್ರಾರಂಭಿಸಿ ಇಲಾಖೆಯಿಂದ ಪೋಡಿ (Podi/Sub-Division) ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.

ದಿನಾಂಕ:25.11.2024ರ ಸರ್ಕಾರದ ಆದೇಶದಂತೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಕಟ್ಟುನಿಟ್ಟಾಗಿ ಯಾವುದೇ ಲೋಪಗಳಿಲ್ಲದೇ ಸರ್ಕಾರಿ ಸಂಸ್ಥೆಗಳಿಗೆ ಮಂಜೂರಾದ ಜಮೀನು ಒಳಗೊಂಡಂತೆ ಪೋಡಿ ಕಾರ್ಯ ನಿರ್ವಹಿಸಲು ಅಗತ್ಯ ಕ್ರಮ ವಹಿಸಲಾಗಿರುತ್ತದೆ.

**<u>ಸಂಖ್ಯೆ: ಕಂಇ 212 ಎಸ್‌ಎಸ್‌ಸಿ 2025</u>**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು